ದಿಃ 30-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀಸವಾಲು:-** ಪ್ರತಿವಾದಿಪರ ವಕೀಲರಿಂದಃ-

ಸರ್ವೇ ನಂ. 37/2 ನೇದರ ಮೊದಲು ಶರಣಪ್ಪ ತಂ. ಸಾಬಯ್ಯರವರು ಹಂದರಕಿ ಮಾಲಿಕನಾಗಿದ್ದರು. ಸದರಿ ಶರಣಪ್ಪ ತೀರಿಕೊಂಡ ನಂತರ ದಾವಾ ಸ್ವತ್ತು ನನ್ನ ಗಂಡ ಭೀಮಪ್ಪರವರಿಗೆ ಬಂದಿತು ಎಂದರೆ ಸರಿ. ಭೀಮಪ್ಪ ತೀರಿಕೊಂಡು 10 ರಿಂದ 11 ವರ್ಷ ಆಗಿದೆ. ಭೀಮಪ್ಪ ಇವರು



ಜೀವಂತ ಇರುವಾಗ ಆತನೆ ದಾವಾ ಸ್ವತ್ತಿನ ಮಾಲಿಕ ಹಾಗೂ ಕಬ್ಜೆದಾರನಾಗಿದ್ದನು ಎಂದರೆ ಸರಿ. ಭೀಮಪ್ಪ ಜೀವಂತ ಇರುವಾಗ ಅವರು ಮಾಡಿರುವ ಎಲ್ಲ ವ್ಯವಹಾರಗಳ ಬಗ್ಗೆ ನನಗೆ ಗೊತ್ತು. ದಿಃ 21.08.1998 ರಂದು ನನ್ನ ಗಂಡ ಭೀಮಪ್ಪ ಇವರು ಕಾಶಮ್ಮ ಗಂ. ವ್ಯಂಕನ ನಾಯಕ ಇವರಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು 1 ಎಕೆರ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಗಂಡನಾದ ಭೀಮಪ್ಪ ಇತನು ದಿಃ 22.06.1999 ರಂದು ದಾವಾ ಸ್ವತ್ತನ್ನು ಮೋಗಲ್ಯಾನ ನಾಯಕ ಇವರಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸಹಾಯ ಆಯುಕ್ತರ ಕಛೇರಿಯಲ್ಲಿ ಪ್ರಕರಣ ನಡೆದಿತ್ತು ಎಂದರೆ ಸರಿ. ಅದರಲ್ಲಿ ನ್ಯಾಯಾಲಯಕ್ಕೆ ಹೋಗಿ ಪರಿಹಾರ ಕೇಳಲು ಆದೇಶ ಮಾಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತು ಖರೀದಿ ಮಾಡಿರುವ ನೊಂದಾಯಿತ ಕ್ರಯಪತ್ರಗಳು ಇಲ್ಲಿಯವರೆಗೂ ನಾನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ನನ್ನ ಗಂಡ ಭೀಮಪ್ಪ ಇತನು ದಾವಾ ಸ್ವತ್ತು ಮೊಗಲ್ಯಾನ ನಾಯಕ ಇತನಿಗೆ ಮಾರಾಟ ಮಾಡಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ದಾಖಲಾತಿ ಸಂಖ್ಯೆ 535/1999-2000 ಮತ್ತು ದಾಖಾಲಾತಿ ಸಂಖ್ಯೆ 547/1998-99 ಸೃಷ್ಠಿಪಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮರೆಡ್ಡಿ ತಂ. ವೆಂಕಟ ರೆಡ್ಡಿ ಪಾಟಿಲ ಈಗ ಜೀವಿತ ಇರುವುದಿಲ್ಲ ಅವರು 20 ವರ್ಷ ಕೆಳಗೆ ಮೃತಪಟ್ಟಿರುತ್ತಾರೆ. ಶರಣಪ್ಪ ಸಾಬಯ್ಯ ಗಾಡದಲ ಇವರು ಜೀವಿತ ಇಲ್ಲ. ಕಾಶಪ್ಪ ತಂ. ಮೊಗಲಪ್ಪ ಇವರು ನನ್ನ ಸಣ್ಣ ಮಾಮನ ಮಗ. ಹಣಮ್ಯಾ ನಾಯಕ ತಂ. ತಾನ್ಯಾ ನಾಯಕ ಗಾಡದನ ನನಗೆ ಗೊತ್ತು. ಭೀಮಪ್ಪ ತಂ. ರಾಮಪ್ಪ ಗಾಡದನ ಗೊತ್ತಿಲ್ಲ. ಕ್ರಯಪತ್ರ ಮಾಡಿರುವ ದಿನಾಂಕದಂದು ಮೊಗಲ್ಯಾನ ನಾಯಕ ಇತನು

ಮಾಲಿಕನಾಗಿದ್ದನು ಎಂದರೆ ಸರಿಯಲ್ಲ. ಸದರಿ ಮೊಗಲ್ಯಾನ ನಾಯಕ ತೀರಿಕೊಂಡಿದ್ದ ನಂತರ ವಾದಿ ವಾದಿಯವರು ದಾವಾ ಸ್ವತ್ತಿನ ಕಬ್ಜೆದಾರರು ಹಾಗೂ ಮಾಲಿಕನಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಾನು ಮಾಲಿಕನಾಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯವರಿಗೆ ಸತಾಯಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**OS.No. 28/2021** **ಡಿ ಡಬ್ಲೂಃ 1**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**